**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 9520/2021 ಸಿ.ಡಬ್ಲ್ಯೂ –06 ಪಿ.ಡಬ್ಲ್ಯೂ -03

| | | |
|---|---|---|
| ಹೆಸರು | ಃ | ಗೌತಮ |
| ತಂದೆಃ ಗಂಡ | ಃ | ಅಣ್ಣಪ್ಪ |
| ವಯಸ್ಸು | ಃ | ೪೬ ವರ್ಷ |
| ಉದ್ಯೋಗ | : | ಎಸ್.ಡಿ.ಎ. |
| ವಾಸಸ್ಥಳ | ಃ | ಹಿತ್ತಲಶಿರೂರು |

ದಿನಾಂಕ:೨೯.೧೨.೨೦೨೩

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ ಅವರಿಂದ ಃ**

ಆರೋಪಿಯ ಪರಿಚಯ ಇರುತ್ತದೆ. ಚಾಸಾ-೧ ರಿಂದ ೫ ೭ ೮ ರವರ ಪರಿಚಯ ಇರುತ್ತದೆ. 2019 ನೇ ಇಸ್ವಿಯಲ್ಲಿ ನಮ್ಮ ಶಾಲೆಯಲ್ಲಿ ಅಕ್ಕಿ, ಗೋಧಿ, ಎಣ್ಣೆ ಪಾಕೇಟ್ ಕಳ್ಳತನ ಆಗಿದ್ದವು. ನಂತರ ನಾವು ಪೋಲಿಸ ಠಾಣೆಗೆ ಹೋಗಿ ಪಿರ್ಯಾದಿ ಸಲ್ಲಿಸಿರುತ್ತೇವೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶ:ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ: 08.10.2015 ಸಂಜೆ 4:30 ರಿಂದ ದಿ: 09.10.2015 ರಂದು 7:30 ಗಂಟೆಯ ಮಧ್ಯದ ಅವಧಿಯಲ್ಲಿ ನಮ್ಮ ಶಾಲೆಯ ಬೀಸಿ ಊಟದ ಕೋಣೆಯ ಬಾಗಿಲು ಬಿಗ್ ಮುರಿದು ಒಳಗೆ ನುಗ್ಗಿ ಯಾರೋ ಕಳ್ಳರು ಕೋಣೆಯಲ್ಲಿ ಇದ್ದ ೩ ಕ್ವಿಂಟಲ್, ೫೦ ಕೆ.ಜಿ ಅಕ್ಕಿ, ೭೫ ಕೆ.ಜಿ ತೋಗರಿ , 10 ಎಣ್ಣೆ ಪಾಕೇಟಗಳನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂದರೆ ಸರಿ. ಆ ರೀತಿಯಾಗಿ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ದಿ: 30.01.2020 ರಂದು ನನ್ನನ್ನು ಚಾಸಾ-೧ ೪ ೫ ೭ ೮ ರವರನ್ನು ಠಾಣೆಗೆ ಕರೆಯಿಸಿ ಪೋಲಿಸರು ಆರೋಪಿ ನಂ.೧ ಮತ್ತು ೨ ರವರನ್ನು ಇವರೆ ಕಳ್ಳತನ ಮಾಡಿರುತ್ತಾರೆ ಎಂದು ತೋರಿಸಿರುತ್ತಾರೆ ಎಂದರೆ ಸರಿ. ಅದೇ ರೀತಿಯಾಗಿ ಆರೋಪಿ ನಂ.೧ ಮತ್ತು೨ ರವರು ಕಳ್ಳತನ ಮಾಡಿರುತ್ತಾರೆ ಎಂದು ಒಪ್ಪಿಕೊಂಡಿರುತ್ತಾರೆ ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಎಂ.ವ್ಹಿ.ಇ ವಕೀಲರಿಂದ**

ನಮ್ಮ ಶಾಲೆಯಲ್ಲಿ ಬಿಸಿ ಊಟದ ಇಲಾಖೆಯಿಂದ ಎಷ್ಟು ಸಾಮಾಗ್ರಿಗಳು ಬಂದಿರುತ್ತವೆ ಎಂದು ಅದನ್ನು ರೆಜಿಸ್ಟೆರನಲ್ಲಿ ಎಂಟ್ರಿಮಾಡಿ, ರೆಜಿಸ್ಟರನ್ನು ಮೆಂಟೆನ

ಮಾಡಿರುತ್ತೇವೆ ಎಂದರೆ ಸರಿ. ಸದರಿ ರೆಜಿಸ್ಟ್ರೆರನ್ನು ಮೆಂಟನ್ನು ಮಾಡು ಜವಾಬ್ಧಾರಿ ಚಾಸಾ-೧ ರವರದು ಇರುತ್ತದೆ. ಸದರಿ ಎಲ್ಲಾ ಸಾಮಾಗ್ರಿಗಳು ಚಾಸಾ-೧ ರವರ ಕಸ್ಟಡಿಯಲ್ಲಿ ಇರುತ್ತದೆ. ಪ್ರತಿದಿನದ ಸಾಮಾಗ್ರಿಗಳ ಖರ್ಚನ್ನು ರೆಜಿಸ್ಟ್ರೆರನಲ್ಲಿ ನಮೂದಿಸಿರುತ್ತೆವೆ ಎಂದರೆ ಸರಿ. ನಿರ್ದಿಷ್ಟವಾದ ದಿನಾಂಕದಂದು ಎಷ್ಟ ಸಾಮಾಗ್ಇಗಳು ಬಂದವು ಎಷ್ಟು ಖರ್ಚು ಆದವು ಎಂದು ರೆಜಿಸ್ಟ್ರೆರನಲ್ಲಿ ಇರುತ್ತದೆ ಎಂದರೆ ಸರಿ. ಯಾವ ತಾರೀಖಗೆ ಎಷ್ಟು ಸಾಮಾಗ್ರಿಗಳು ಬಂದವು ಮತ್ತು ಅವು ಎಷ್ಟು ಖರ್ಚು ಆದವು ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ಸದರಿ ಸಾಮಾಗ್ರಿಗಳ ಕುರಿತು ಚಾಸಾ-೧ ರವರು ಬಿ.ಇ.ಓ ರವರಿಗೆ ವರದಿ ಮಾಡಬೇಕಾಗುತ್ತದೆ ಎಂದರೆ ಸರಿ. ನಾನು ಕಳ್ಳತನ ಮಾಡಿರುವುದನ್ನು ಕಣ್ಣಾರೆ ನೋಡಿರುವುದಿಲ್ಲ.

ಪೋಲಿಸರು ನನ್ನನ್ನು ಯಾವ ತಾರೀಖಿಗೆ ಕರೆದರು ಮತ್ತು ಎಷ್ಟು ಗಂಟೆಗೆ ಕರೆದರು ಎಂದು ನನಗೆ ನೆನಪಿಲ್ಲ. ಪೋಲಿಸರು ಏನು ಬರೆದುಕೊಂಡರು ಎಂದರೆ ನನಗೆ ಗೊತ್ತಿಲ್ಲ ಎಂದರೆ ಸರಿ. ಪಿರ್ಯಾದಿಯನ್ನು ಚಾಸಾ-೧ ರವರು ಯಾರೋ ಅಪರಿಚಿತರು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂದು ಪಿರ್ಯಾದಿಯನ್ನು ಸಲ್ಲಿಸಿರುತ್ತಾರೆ ಎಂಧರೆ ಸರಿ. ತನಿಖೆ ಮಾಡಿ ಪೋಲಿಸರು ಸಿ ವರದಿಯನ್ನು ಸಲ್ಲಿಸಿರುತ್ತಾರೆ ಅದರ ಕಾಪಿ ಸಹ ಕೊಡಾ ಚಾಸಾ-೧ ರವರಿಗೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಅದಕ್ಕೆ ಅನುಗುಣವಾಗಿ ಬಂದು ಸಿ ವರಿದಿಗೆ ಯಾವುದೇ ತರಕಾರು ಇಲ್ಲ ಎಂದು ಹೇಳಿರುತ್ತಾರೆ ಎಂದರೆ ಸರಿ. ಪೋಲಿಸರು ಠಾಣೆಗೆ ಕರೆಯಲು ಯಾವುದೇ ನೋಟಿಸ ನೀಡಿರುವುದಿಲ್ಲ. ಯಾವ ತಾರೀಕಿಗೆ ಎಷ್ಟು ಗಂಟೆಗೆ ಕಳ್ಳತನವಾಗಿದೆ ಎಂದು ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಪೋಲಿಸರು ಹೇಳಿದ ನಂತರ ಗೊತ್ತಾಗಿರುತ್ತದೆ ಎಂಧರೆ ಸರಿ. ಸದರಿ ೩ ಕ್ವೀಂಟಲ್, ೫೦ ಕೆ.ಜಿ ಅಕ್ಕಿ, ೭೫ ಕೆ.ಜಿ ತೋಗರಿ , ೧೦ ಎಣ್ಣೆ ಪಾಕೇಟಗಳು ಸಿಕ್ಕಿರುವುದಿಲ್ಲ ಮತ್ತು ಪೋಲಿಸರು ಅವುಗಳನ್ನು ಜಪ್ತಿ ಪಡೆಸಿಕೊಂಡಿರುವುದಿಲ್ಲ ಎಂಧರೆ ಸರಿ. ಬಿ.ಇ.ಓ ರವರು ಬಿಸಿ ಊಟದ ಖರ್ಚು ವೆಚ್ಚಗಳ ಬಗ್ಗೆ ಯಾವುದೇ ಮಾಹಿತಿ ಚಾಸಾ-೧ ರವರ ನೀಡದ್ದರೆ ಅವರ ಮೇಲೆ ಸೂಕ್ತ ಕ್ರಮ ತೆಗೆದಕೊಳ್ಳಬಹುದು ಎಂದರೆ ಸರಿ.

ಬಿಗ ಮುರಿದು ಕಳ್ಳತನ ಮಾಡಿರುತ್ತಾರೆ ಎಂದು ಹೇಳುತ್ತೀರಲ್ಲ ಸದರಿ ಬಿಗ ಯಾವ ಕಂಪನಿ ಇತ್ತು ಎಂದು ಹೇಳಲು ಬರುತ್ತದಯಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಬಿಗವನ್ನು ನಾವು ಪೋಲಿಸರಿಗೆ ನೀಡಿರುವುದಿಲ್ಲ.

ನಾನು ಚಾಸಾ-೧ ಮತ್ತು ೮ ರವರು ಸೇರಿಕೊಂಡು ಸದರಿ ಸಾಮಾಗ್ರಿಗಳನ್ನ ನುಗ್ಗಿ ಹಾಕಿ ಅದನ್ನು ಮುಚ್ಚಬೇಕು ಎನ್ನುವ ಉದ್ದೇಶದಿಂದ ಚಾಸಾ-೧ ರವರ ಮೂಲಕ ಕೊಟ್ಟಿ ಪಿರ್ಯಾದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತೇನೆ ಎಂದರೆ ಸರಿ ಅಲ್ಲ. ಆರೋಪಿ ನಂ.೧ ಪದವಿಧವರರು  ಇರುತ್ತಾರೆ ಎಂದರೆ ಸರಿ. ಆರೋಪಿ ನಂ.೧ ಮತ್ತು ೨ ರವರು ಹಿತ್ತಲಶಿರೂರ ಗ್ರಾಮದಲ್ಲಿ ಒಕ್ಕಲತನ ಮಾಡಿ ಜೀವನ ನಡೆಸುತ್ತೀದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ಥಾರೆ. ನಾನು ಚಾಸಾ-೧ ೮ ಮತ್ತು ಪೋಲಿಸ ಅಧಿಕಾರಿಗಳು ಮೀಲಾಪೆಯಾಗಿ ಆರೋಪಿತರ ಮೇಲೆ ಕೊಟ್ಟಿ ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತೇನೆ ಎಂದರೆ ಸರಿ ಅಲ್ಲ.

ದಿ: 08.10.2015 ಸಂಜೆ 4:30 ರಿಂದ ದಿ: 09.10.2015 ರಂದು 7:30 ಗಂಟೆಯ ಮಧ್ಯದ ಅವಧಿಯಲ್ಲಿ ನಮ್ಮ ಶಾಲೆಯ ಬೀಸಿ ಊಟದ ಕೋಣೆಯ ಬಾಗಿಲು  ಬಿಗ್ ಮುರಿದು ಒಳಗೆ ನುಗ್ಗಿ ಯಾರೋ ಕಳ್ಳರು ಕೋಣೆಯಲ್ಲಿ ಇದ್ದ ೩ ಕ್ವೀಂಟಲ್, ೫೦ ಕೆ.ಜಿ ಅಕ್ಕಿ, ೭೫ ಕೆ.ಜಿ ತೋಗರಿ , 10 ಎಣ್ಣೆ ಪಾಕೇಟಗಳನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಾರೆ ಎಂದರೆ ಸರಿ ಅಲ್ಲ.  ಆ ರೀತಿಯಾಗಿ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಾರೆ ಎಂದರೆ ಸರಿ ಅಲ್ಲ. ದಿ: 30.01.2020 ರಂದು ನನ್ನನ್ನು ಚಾಸಾ-೧ ೪ ೫ ೭ ೮ ರವರನ್ನು ಠಾಣೆಗೆ ಕರೆಯಿಸಿ ಪೋಲಿಸರು ಆರೋಪಿ ನಂ.೧ ಮತ್ತು ೨ ರವರನ್ನು ಇವರೆ ಕಳ್ಳತನ ಮಾಡಿರುತ್ತಾರೆ ಎಂದು ತೋರಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಾರೆ ಎಂದರೆ ಸರಿ ಅಲ್ಲ. ಅದೇ ರೀತಿಯಾಗಿ ಆರೋಪಿ ನಂ.೧ ಮತ್ತು೨ ರವರು ಕಳ್ಳತನ ಮಾಡಿರುತ್ತಾರೆ ಎಂದು ಒಪ್ಪಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಾರೆ ಎಂದರೆ ಸರಿ ಅಲ್ಲ. 2019 ನೇ ಇಸ್ವಿಯಲ್ಲಿ ನಮ್ಮ ಶಾಲೆಯಲ್ಲಿ ಅಕ್ಕಿ, ಗೋಧಿ, ಎಣ್ಣೆ ಪಾಕೇಟ್ ಕಳ್ಳತನ ಆಗಿದ್ದವು. ನಂತರ ನಾವು ಪೋಲಿಸ ಠಾಣೆಗೆ ಹೋಗಿ ಪಿರ್ಯಾದಿ ಸಲ್ಲಿಸಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂಥರೆ ಸರಿ ಅಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ